# ಪತ್ರಿಕಾ ಪ್ರಕಟಣೆ

| |
|---|
| **ಕಾರ್ಯಕ್ರಮ: ಸಾರ್ವಜನಿಕ ಶಿಕ್ಷಣ ಕ್ಷೇತ್ರದಲ್ಲಿ ಸಾರ್ವಜನಿಕ ತಂತ್ರಾಂಶದ ಸಾಫ್ಟವೇರ್ ತತ್ವಗಳು** -ದಕ್ಷಿಣ ಭಾರತೀಯ ಮಟ್ಟದ ಕಾರ್ಯಾಗಾರ |
| **ದಿನಾಂಕ:** 1ನೇ ಮತ್ತು 2ನೇ ಫೆಬ್ರವರಿ, 2010 ಬೆಳಿಗ್ಗೆ 9:00 ರಿಂದ ಮಧ್ಯಾಹ್ನ 6:00 ವರೆಗೆ |
| **ಸ್ಥಳ:** ಮೊನಾರ್ಕ ಲಕ್ಸರ್ ಹೋಟೆಲ್, #67, ಇನ್ ಫ್ಯಾಂಟ್ರಿ ರಸ್ತೆ, ಬೆಂಗಳೂರು ಫೋನ್: 080 25328253/2532 8250 |
| **ಸಹ-ಸಂಘಟಕರು:** ಯುನೆಸ್ಕೋ, ಇ-ಗವರ್ನೆನ್ಸ್ ಡಿಪಾರ್ಟ್ಮೆಂಟ್, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸರ್ವ ಶಿಕ್ಷಣ ಅಭಿಯಾನ, ಕರ್ನಾಟಕ ಜ್ಞಾನ ಆಯೋಗ (ಕರ್ನಾಟಕ ನಾಲೆಡ್ಜ್ ಕಮೀಷನ್) ಮತ್ತು ಐಟಿ ಫಾರ್ ಚೇಂಜ್ (ಐಟಿಎಫ್ ಸಿ) |

## ದಕ್ಷಿಣ ಭಾರತೀಯ ಮಟ್ಟದ ನಿಯಮ ರಚನಾಕಾರರು ಸಾರ್ವಜನಿಕ ವಿಭಾಗದ ಸಾಫ್ಟವೇರ್ ತತ್ವಗಳು ಮತ್ತು ನಿಯಮಗಳ ಬಗ್ಗೆ ಚರ್ಚೆ ಮಾಡಲು ಭೇಟಿಯಾಗಲಿದ್ದಾರೆ

ದಕ್ಷಿಣ ಭಾರತದ ನಾಲ್ಕು ರಾಜ್ಯಗಳ(ಆಂಧ್ರಪ್ರದೇಶ, ಕರ್ನಾಟಕ, ಕೇರಳ ಮತ್ತು ತಮಿಳುನಾಡು) ನಿಯಮಗಳ ರಚನೆಯಲ್ಲಿ ತೊಡಗಿಸಿಕೊಂಡವರು, ದಿನಾಂಕ 1 ಮತ್ತು 2 ಫೆಬ್ರವರಿಯಂದು ಹೋಟೆಲ್ ಮೊನಾರ್ಕ್ ಲಕ್ಸರದಲ್ಲಿ **ಸಾರ್ವಜನಿಕ ಶಿಕ್ಷಣ ಕ್ಷೇತ್ರದಲ್ಲಿ ಸಾರ್ವಜನಿಕ ತಂತ್ರಾಂಶದ ಸಾಫ್ಟವೇರ್ ತತ್ವಗಳು** *-ದಕ್ಷಿಣ ಭಾರತೀಯ ಮಟ್ಟದ ಕಾರ್ಯಾಗಾರದಲ್ಲಿ* ಭೇಟಿಯಾಗಲಿದ್ದಾರೆ. ತಜ್ಞರು, ಅಭ್ಯಾಸನಿರತರು, ನಾಗರಿಕ ಸಮಾಜ ಮತ್ತು ಐಟಿ ಉದ್ಯಮಿಗಳು ಈ ಮೇಲಿನ ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ

ಸಾಫ್ಟವೇರ್ ಎಲ್ಲಾ ಸಾಂಘೀಕ ಪ್ರಕ್ರಿಯೆಯಲ್ಲಿ ಪ್ರಮುಖವಾಗಿದೆ. ಸರ್ಕಾರದಲ್ಲೂ ಇದರ ಪ್ರಾಮುಖ್ಯತೆ ಕಡಿಮೆಯದೇನಲ್ಲ. ಅಂಕೀಯ ಸಲಕರಣೆಗಳು ಮತ್ತು ವ್ಯವಸ್ಥೆಗಳು ಗವರ್ನೆನ್ಸ್ ಸುಧಾರಣೆಯ ಪ್ರಮುಖ ಸಾಧನಗಳಾಗಿದೆ. ಈವೊಂದು ಪರಿಕಲ್ಪನೆಯಿಟ್ಟುಕೊಂಡು ಸಾರ್ವಜನಿಕ ವಿಭಾಗಕ್ಕೆ ಸಾಫ್ಟವೇರ್ ನ ನಿರ್ದಿಷ್ಟ ಲಕ್ಷಣಗಳನ್ನು ಮತ್ತು ಅವಶ್ಯಕತೆಗಳ ಬಗ್ಗೆ ಚರ್ಚೆ ನಡೆಸುವುದು ಅವಶ್ಯಕವಾಗಿದೆ.

ಸದರಿ ಕಾರ್ಯಾಗಾರವು ಸಾರ್ವಜನಿಕ ವಿಭಾಗದ ಸಾಫ್ಟವೇರ್ ನ ತತ್ವಗಳ ಪರಿಕಲ್ಪನೆಗೆ ಒಂದು ಅವಕಾಶವನ್ನು ಕಲ್ಪಿಸುತ್ತದೆ ಮತ್ತು ಸಾರ್ವಜನಿಕ ವಿಭಾಗದಲ್ಲಿ ಫ್ರೀ ಮತ್ತು ಓಪನ್ ಸೋರ್ಸ್ ಸಾಫ್ಟವೇರ್ (ಫಾಸ್)ನ್ನು ಅಳವಡಿಸಿಕೊಳ್ಳಲು (ಮುಖ್ಯವಾಗಿ ಶಾಲೆಗಳಲ್ಲಿ) ಅಡ್ಡಿಯಿರುವ ಸವಾಲುಗಳು ಮತ್ತು ಅವಕಾಶಗಳ ಬಗ್ಗೆ ಚರ್ಚೆಯನ್ನು ಮಾಡುತ್ತದೆ . ಕಾರ್ಯಾಗಾರವನ್ನು ಮಂಡನೆಗಳೊಂದಿಗೆ ನಡೆಸುವುದಕ್ಕಿಂತ ಸಹಸಂಘಟಕರು ಭಾಗವಹಿಸುವಿಕೆದಾರರನ್ನು ಚರ್ಚೆಯಲ್ಲಿ ತೊಡಗಿಸಿಕೊಳ್ಳುವಂತೆ ತಿಳಿಸಿದ್ದಾರೆ. ಕಾರ್ಯಾಗಾರದ ಮೊದಲನೇ ದಿನವು ಸಾರ್ವಜನಿಕ ಶಿಕ್ಷಣಕ್ಕೆ ಗಮನಹರಿಸಿದರೆ, ಎರಡನೇ ದಿನವು ಸಾರ್ವಜನಿಕ ವಿಭಾಗದ ಸಾಫ್ಟವೇರ್ ತತ್ವಗಳ ಪ್ರಗತಿಯನ್ನು ವಿವರಿಸುತ್ತದೆ.

ಸಮಾವೇಶವು, ಸಾರ್ವಜನಿಕ ವಿಭಾಗದಲ್ಲಿನ ಸನ್ನಿವೇಶ, ದೃಷ್ಟಿಕೋನವನ್ನು ವಿವರಿಸುತ್ತದೆ, ಇದರಲ್ಲಿ ಸಾರ್ವತ್ರಿಕ ದೊರಕುವಿಕೆಯ ತತ್ವಗಳು, ಭಾಗವಹಿಸುವಿಕೆ, ಪಾರದರ್ಶಕತೆ ಮತ್ತು ಸಾಮಾಜಿಕ ನ್ಯಾಯದ ಅಂಶಗಳು ಸಾರ್ವಜನಿಕ ವಿಭಾಗಕ್ಕಾಗಿ ಇರುವ

ಸಾಫ್ಟವೇರ್ ಗಳ ರೂಪುರೇಷೆಯನ್ನು ವಿವರಿಸುತ್ತದೆ. ದಕ್ಷಿಣದ ರಾಜ್ಯಗಳು ಸಾರ್ವಜನಿಕ ಸಾಫ್ಟವೇರ್ ನ್ನು ಬಳಸಿ ಹಮ್ಮಿಕೊಂಡ ಕಾರ್ಯಕ್ರಮ (ಯೋಜನೆ)ಗಳ ಅನುಭವ ಮತ್ತು ಕಲಿಕೆಗಳ ಹಂಚಿಕೆ ಮತ್ತು ಸವಾಲುಗಳ ಬಗ್ಗೆ ಬೆಳಕುಚೆಲ್ಲುವುದು.

ಈ ಕಾರ್ಯಾಗಾರದ ಮುಖ್ಯವಾದ ಉದ್ದೇಶವು ಚರ್ಚೆಗಳಿಂದ ಎರಡು ದಾಖಲೆಗಳನ್ನು ಸೃಷ್ಟಿಸುವುದಾಗಿದೆ.'***ಸಾರ್ವಜನಿಕ ವಿಭಾಗದ ಸಾಫ್ಟವೇರ್ ಗೆ ಮಾರ್ಗದರ್ಶಕ ತತ್ವಗಳು", 'ಸಾರ್ವಜನಿಕ ಸಾಫ್ಟವೇರ್ ಯೋಜನೆಗಳ ಅನುಭವಗಳು, ಕಲಿಕೆಗಳ ಜೊತೆಗೆ ಸವಾಲುಗಳು"***
ಈ ದಾಖಲೆಗಳು ಕೇರಳ ಸರ್ಕಾರ, ಯುನೆಸ್ಕೋ, ಸೊಲ್ಯುಶನ್ ಎಕ್ಸಚೇಂಜ್, ಐಟಿ ಫಾರ್ ಚೇಂಜ್ ಮಾರ್ಚ್ 2010 ರಲ್ಲಿ ಸಂಘಟಿಸುವ ಅಂತರಾಷ್ಟ್ರೀಯ ಕಾರ್ಯಾಗಾರಕ್ಕೆ ಬುನಾದಿಯನ್ನು ಒದಗಿಸಲಿದೆ.
ಭಾಗವಹಿಸುವಿಕೆಯು ಅಹ್ವಾನದ ಮೂಲಕ ಮಾತ್ರ.

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:**
ಕೃತ್ತಿಕಾ ವಿಶ್ವನಾಥನ್
ಐಟಿ ಫಾರ್ ಚೇಂಜ್
ದೂರವಾಣಿ: (9535-321980
ಈಮೈಲ್: Krittika@ITforChange.net